ಉ) ಮಂಡ್ಯ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ವಿಶೇಷ ಅನುದಾನವನ್ನು ನೀಡುವುದೇ;

ಊ) ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕಳೆದ ಮೇ ಮತ್ತು ಜೂನ್ ತಿಂಗಳಿನಲ್ಲಿ ನಿರಂತರ ವಿದ್ಯುತ್ ಸರಬರಾಜಿನಲ್ಲಿ ಆದ ವ್ಯತ್ಯಯದಿಂದ ಹಾಗೂ ವಿ.ಸಿ. ನಾಲಾದಲ್ಲಿ ನೀರಿನ ಹರಿಯುವಿಕೆಯು ನಿಂತಿದ್ದರಿಂದ ಮಂಡ್ಯ ನಗರದಲ್ಲಿ ಕುಡಿಯುವ ನೀರಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಷಯದಲ್ಲಿ ವಿದ್ಯುತ್ ನಿಗಮದೊಂದಿಗೆ ಚರ್ಚಿಸಿ ಪ್ರಸ್ತುತ ತಿಂಗಳಿನಲ್ಲಿ ವಿದ್ಯುತ್ ವ್ಯತ್ಯಯ ತೊಂದರೆ ನಿವಾರಣೆಯಾಗಿರುತ್ತದೆ. ಇದಲ್ಲದೆ ವಿ.ಸಿ.ನಾಲದಲ್ಲೂ ನಿರನ್ನು ಬಿಡಲಾಗಿರುತ್ತದೆ.

ಇ) –ಬಂದಿದೆ–

ಈ) ಸರ್ಕಾರವು ಮಳೆ ನೀರು ಕೊಯ್ಲು ಕಾರ್ಯಕ್ರಮದ ಬಗ್ಗೆ ರಾಜ್ಯ ನೀತಿ ಮತ್ತು ಕರಡು ನಿಯಮಗಳನ್ನು ರೂಪಿಸುತ್ತಿದೆ. ಅನಂತರ ನಗರದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಅರಿವನ್ನು ಮೂಡಿಸುವ ಸಲುವಾಗಿ ಕರ್ನಾಟಕ ಪುರಸಭೆ ಕಾಯ್ದೆಗೆ ತಿದ್ದುಪಡಿ ತಂದು ಎಲ್ಲಾ ಕಟ್ಟಡಗಳ ಮೇಲೆ ಕಡ್ಡಾಯವಾಗಿ ಮಳೆ ನೀರು ಕೊಯ್ಲು ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಇದು ತಾತ್ಕಾಲಿಕ ತೊಂದರೆಯಾಗಿದ್ದು, ನಿರಂತರವಾದ ವಿದ್ಯುತ್ ಸರಬರಾಜನ್ನು ಮಾಡಿದ್ದಲ್ಲಿ, ಸಾಕಷ್ಟು ನೀರನ್ನು ಸರಬರಾಜು ಮಾಡಲಾಗುವುದು.

ಊ) ಉದ್ಭವಿಸುವುದಿಲ್ಲ.

550 ಶ್ರೀ ಸುರೇಶ್‌ಬಾಬು ಸಿ.ಬಿ.(ಚಿಕ್ಕನಾಯಕನಹಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕೋಡಿಹಳ್ಳಿ ಗ್ರಾಮದ ಸ.ನಂ–40 ಗೋಮಾಳ ಮತ್ತು ಅರಣ್ಯ ಜಮೀನಿನಲ್ಲಿ ಬಳಪದ ಕಲ್ಲುಗಣಿಗಾರಿಕೆ ಮಾಡಲು ಗಣಿಗುತ್ತಿಗೆ ನೀಡಲಾಗಿದೆಯೇ?

ಆ) ನೀಡಿದ್ದಲ್ಲಿ, ಯಾವ ಕಂಪನಿಗೆ ನೀಡಲಾಗಿದೆ; ಎಷ್ಟು ವರ್ಷಗಳ ಅವಧಿಗೆ ನೀಡಲಾಗಿದೆ (ಸಂಪೂರ್ಣ ಮಾಹಿತಿ ಒದಗಿಸುವುದು);

ಇ) ಈ ಜಮೀನಿನ ಸುತ್ತಮುತ್ತಲು ಗ್ರಾಮದ ರೈತರುಗಳು ದನಕರುಗಳಿಗೆ ಹುಲ್ಲು ಮೇಯಿಸಲು ಉಪಯೋಗಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಆದಾಗ್ಯೂ ಈ ಜಮೀನಿನಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲು ಕಾರಣಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು. ಗುತ್ತಿಗೆ ನೀಡಲಾಗಿದೆ.

ಆ) ಶ್ರೀಮತಿ ಸುವರ್ಣ ಪಡಿಯಾರ್ ಎಂಬುವವರಿಗೆ ಕೋಡಿಹಳ್ಳಿ ಗ್ರಾಮದ ಸರ್ವೆ ನಂ–40ರ 80–00 ಎಕರೆ ಪ್ರದೇಶದಲ್ಲಿ ಬಳಪದಕಲ್ಲು ಗಣಿ ಗುತ್ತಿಗೆ (ಸಂಖ್ಯೆ:2273)ಯನ್ನು ದಿ:23–06–2000 ದಿಂದ 20 ವರ್ಷಗಳ ಅವಧಿಗೆ ನೀಡಲಾಗಿದೆ. ಗುತ್ತಿಗೆದಾರರ ಕೋರಿಕೆ ಮೇರೆಗೆ ಖನಿಜ ರಿಯಾಯಿತಿ ನಿಯಮ 1960ರ ನಿಯಮ–37 ರ ಮೇರೆಗೆ ಮೆ: ಮಾತಾ ಮೈನಿಂಗ್ ಕಂಪನಿ ಹೆಸರಿಗೆ ವರ್ಗಾಯಿಸಲಾಗಿದೆ.

ಇ) ಕೋಡಿಹಳ್ಳಿ ಗ್ರಾಮದ ಸರ್ವೆ ನಂ–40ರ ಒಟ್ಟು 433.11 ಎಕರೆ ಸರ್ಕಾರಿ ಗೋಮಾಳವಾಗಿದ್ದು, ಈ ಪೈಕಿ 80–00 ಎಕರೆ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿಲ್ಲವಾದ್ದರಿಂದ, ಗುತ್ತಿಗೆ ಮಂಜೂರು ಮಾಡಬಹುದೆಂದು ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ಇವರು ದಿ:03–07–1997ರ ಪತ್ರ ಸಂಖ್ಯೆ: ಐಎನ್ ಡಿಸಿಆರ್ 15/97–98ರಲ್ಲಿ ಶಿಫಾರಸ್ಸು ಮಾಡಿದ್ದರ ಮೇರೆಗೆ, ನಿಯಮಾನುಸಾರ ಗುತ್ತಿಗೆಯನ್ನು ಮಂಜೂರು ಮಾಡಲಾಗಿದೆ.

ಈ) ಅರ್ಜಿದಾರರು ಬಳಪದಕಲ್ಲು ಗಣಿಗುತ್ತಿಗೆ ಮಂಜೂರಾತಿಗಾಗಿ ನಿಯಮಾನುಸಾರ ಅರ್ಜಿಯನ್ನು ಸಲ್ಲಿಸಿದ್ದು, ಜಿಲ್ಲಾಧಿಕಾರಿಯವರ ನಿರಾಕ್ಷೇಪಣ ಪತ್ರವೂ ಸೇರಿದಂತೆ ಎಲ್ಲ ಅಗತ್ಯ ದಾಖಲೆಗಳನ್ನು ಪಡೆದು, ಎಂ.ಎಂ(ಡಿ.ಆರ್) ಆಕ್ಟ್ ಮತ್ತು ಖನಿಜ ರಿಯಾಯಿತಿ ನಿಯಮಾವಳಿಗಳನುಸಾರ ಪರಿಶೀಲಿಸಿ ಗಣಿಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ.

201 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಂದಾಪುರದಲ್ಲಿ ಸರ್ಕಾರವು ನಿರ್ಮಿಸಲು ಉದ್ದೇಶಿಸಿದ್ದ ಮಾನವ ರಹಿತ ವಿಮಾನ ನಿಲ್ದಾಣದ ಕಾಮಗಾರಿ ಯಾವ ಹಂತದಲ್ಲಿದೆ;